**ಗುಂಡ:** ಅಜ್ಜಿ ನಿದ್ದೆ ಬರ್ತಿಲ್ಲ. ಟೀವಿ ನೋಡ್ಲಾ?
**ಅಜ್ಜಿ:** ಬೇಡ ಬಾರೋ ನನ್ನ ಜೊತೆ ಮಾತನಾಡುವಿಯಂತೆ.
**ಗುಂಡ:** ನೀನು, ನಾನು, ಅಪ್ಪ, ಅಮ್ಮ, ಅಕ್ಕ ಮತ್ತು ಬೆಕ್ಕು ಸೇರಿ ಮನೆಯಲ್ಲಿ ಆರೇ ಜನ ಇರ್ತೀವಾ?
**ಅಜ್ಜಿ:** ಇಲ್ವೋ... ನೀನು ಮನೆಗೆ ನಾಯಿ ತರಬೇಕು ಅಂತಿದ್ದೆಯಲ್ಲ. ಅದು ಬಂದ್ರೆ ಏಳು ಆಗ್ತೀವಿ.
**ಗುಂಡ:** ನಾಯಿ ತಂದರೆ ಬೆಕ್ಕನ್ನು ತಿಂದುಬಿಡುತ್ತದೆ. ಆಮೇಲೆ ಮತ್ತೆ ಆರೇ ಆಗ್ತಿವಲ್ವಾ?
**ಅಜ್ಜಿ:** ನೀನು ದೊಡ್ಡವನಾದ ಮೇಲೆ ಮದುವೆ ಆದಾಗ, ನಿನ್ನ ಹೆಂಡತಿ ಸಹ ಬರ್ತಾಳೆ. ಆಗ ಮತ್ತೆ ಏಳು ಆಗ್ತೀವಿ.
ಗುಂಡ: ಅಕ್ಕ ಮದುವೆಯಾಗಿ ಹೋಗ್ತಾಳೆ. ಆಗ ಮತ್ತೆ ಅಷ್ಟೇ ಇರ್ತೀವಲ್ವಾ?
**ಅಜ್ಜಿ:** ಇಲ್ವಪ್ಪ... ನಿನಗೆ ಮಗು ಆಗುತ್ತಲ್ಲ, ಆಗ ಮತ್ತೆ ಏಳು ಆಗ್ತೀವಿ.
**ಗುಂಡ:** ಅಷ್ಟೊತ್ತಿಗೆ ನೀನು ಸತ್ತೋಗ್ತಿಯಲ್ಲ. ಮತ್ತೆ ಆರೇ ಆಗೋದು!
**ಅಜ್ಜಿ:** ಅಯ್ಯೋ ಪಾಪಿ ಮುಂಡೇದೆ. ಹೋಗಿ ಟೀವಿ ನೋಡ್ಕೊ ಹೋಗು.

***

**ಹೆಂಡತಿ:** ರೀ... ನಿಮ್ಮ ಗೆಳೆಯ ಮದುವೆ ಆಗ್ತಿರೋ ಹುಡುಗಿ ಸ್ವಲ್ಪನೂ ಚೆನ್ನಾಗಿಲ್ಲ. ನೀವಾದ್ರೂ ಹೇಳ್ಬಾರ್ದಾ?
**ಗಂಡ:** (ಸಿಟ್ಟಿನಿಂದ) ನಾನ್ಯಾಕೆ ಹೇಳಲಿ. ನಾನು ಮದುವೆ ಆಗುವಾಗ ಆ ಬಡ್ಡೀಮಗ ಏನಾದ್ರೂ ಹೇಳಿದ್ನಾ? ಸುಮ್ನೆ ಇದ್ನಲ್ಲ. ಈಗ ನಾನೂ ಸುಮ್ನೆ ಇರ್ತಿನಿ!

***

**ಹೆಂಡತಿ:** ರೀ... ಸುಖಾ ಸುಮ್ಮನೆ ನಮ್ಮಪ್ಪನನ್ನು ದೂರ ಬೇಡಿ. ಹೆಣ್ಣು ಕೊಟ್ಟ ಮಾವ ಕಣ್ಣು ಕೊಟ್ಟು ದೇವರು ಇಬ್ರೂ ಒಂದೇ ಅಂತೆ!
**ಗುಂಡ:** ಛೇ... ಎಂಥ ಹೋಲಿಕೆ ಮಾಡ್ಬಿಟ್ಟೆ. ಏನೇ ಆದ್ರೂ ದೇವರಿಗೆ ಇರುವ ಗುಣ ನಿಮ್ಮಪ್ಪಂಗೆ ಇಲ್ಲ ಬಿಡು.
**ಹೆಂಡತಿ:** ಯಾಕೆ?
**ಗುಂಡ:** ದೇವರು ಎರಡು ಕಣ್ಣು ಕೊಟ್ಟ, ಆದರೆ ನಿಮ್ಮಪ್ಪ ಒಂದೇ ಹೆಣ್ಣು ಕೊಟ್ಟ... ಅದ್ಕೆ!

***

**ಲೆಕ್ಚರರ್:** ಗಾಂಧಿ ಜಯಂತಿ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
**ವಿದ್ಯಾರ್ಥಿ:** ಗಾಂಧೀಜಿ ಮಹಾನ್ ವ್ಯಕ್ತಿ. ಜಯಂತಿ ಯಾರೋ ಗೊತ್ತಿಲ್ಲ!

***

**ಸಂದರ್ಶಕ:** ನೀವು ಸುಮ್ಮನೆ ಊಹಿಸಿಕೊಳ್ಳಿ, ನೀವಿರುವ ಮೂರನೇ ಅಂತಸ್ತಿನಲ್ಲಿ ಬೆಂಕಿ ಕಾಣಿಸಿಕೊಂಡರೆ ಏನು ಮಾಡುತ್ತೀರಿ?
**ಅಭ್ಯರ್ಥಿ:** ಬಹಳ ಸುಲಭ. ನಾನು ಊಹಿಸಿಕೊಳ್ಳುವುದನ್ನೇ ಬಿಟ್ಟಿಡುತ್ತೇನೆ!

***

**ಬಬ್ಲು:** ನನ್ನನ್ನುತ್ತೆ, ಆ ಹುಡುಗಿ ಕಿವುಡತನದಿಂದ ಬಳಲುತ್ತಿರಬೇಕು.
**ಸ್ನೇಹಿತ:** ನಿನಗೆ, ಯಾಕೆ ಹಾಗನಿಸಿತು?
**ಬಬ್ಲು:** ಆವಾಗ್ಲೆ ಆ ಹುಡುಗಿ ಹತ್ರ ಹೋಗಿ, 'ಐ ಲವ್ ಯು' ಅಂದೆ. ಆದಕ್ಕವಳು, 'ನನ್ನ ಚಪ್ಪಲಿ ಹೊಸಾದು' ಅಂದಳು.

***

**ಉಪಾಧ್ಯಾಯರು:** ಏಸು, ಕೃಷ್ಣ, ರಾಮ, ಗಾಂಧಿ ಹಾಗೂ ಬುದ್ಧಿ ಇವರೆಲ್ಲರನ್ನೂ ಒಂದು ಸಾಮ್ಯತೆ ಇದೆ. ಏನು ಅದು?
**ವಿದ್ಯಾರ್ಥಿ:** ಇವರೆಲ್ಲರೂ ಸರ್ಕಾರಿ ರಜೆ ದಿನವನ್ನು ಹುಟ್ಟಿಸಿದರು!

ಬಬ್ಲು ವಿಮಾನದಲ್ಲಿ ಮುಂಬೈಗೆ ಹೋಗುತ್ತಿದ್ದ. ವಿಮಾನ ಇನ್ನೇನು ನಿಲ್ದಾಣದಲ್ಲಿ ಇಳಿಯಬೇಕು ಅನ್ನುವಷ್ಟರಲ್ಲಿ ಅವನು, 'ಬಾಂಬೆ... ಬಾಂಬೆ...' ಎಂದು ಕಿರುಚಿದ. ಆಗ ಗಗನಸಖಿ ಬಂದು, 'ಬಿ ಸೈಲೆಂಟ್' ಅಂದಳು. ಅದಕ್ಕೆ ಬಬ್ಲು 'ಓಕೆ' ಅಂತೇಳಿ, 'ಒಂಬೆ, ಒಂಬೆ' ಎಂದು ಮತ್ತೆ ಕಿರುಚಿದ!

***

ಮಿಕ್ಸಿ ಅಂಗಡಿಯೊಂದಕ್ಕೆ ಗಂಡ ಹೆಂಡತಿ ಹೋದರು. ಹೆಂಡತಿ ಬೇರೆ ಬೇರೆ ಮಿಕ್ಸಿಗಳನ್ನು ಅರ್ಧ ಗಂಟೆಯಿಂದ ನೋಡಿ ಗಂಡನತ್ತ ತಿರುಗಿದರೆ, ಸೇಲ್ಸ್ ಗರ್ಲ್‌ನೊಡನೆ ಹರಟೆ ಹೊಡೆಯುತ್ತಾ ನಿಂತಿರುವುದನ್ನು ಗಮನಿಸಿ, ಗಂಡನ ಭುಜ ತಟ್ಟಿದ ಹೆಂಡತಿ, 'ರೀ ಎಕ್ಸ್‌ಚೇಂಜ್ ಆಫರ್ ಇರುವುದು ಮಿಕ್ಸಿ ಮೇಲೆ ಮಾತ್ರ' ಅಂದಳು!

***

'ರೀ... ಕೆಲಸದವಳ ಜೊತೆ ಏನಾದರೂ ತರ್ಲೆ ಮಾಡಿದ್ರಾ' ಎಂದು ಹೆಂಡತಿ ಗಂಡನನ್ನು ಪ್ರಶ್ನಿಸಿದಳು. ಗಾಬರಿಗೊಂಡ ಗಂಡ, 'ಇಲ್ವಲ್ಲಾ, ಏಕೆ ಏನಾಯ್ತು' ಎಂದ. 'ಅಲ್ಲಾ... ಇಷ್ಟು ದಿನ ಅಮ್ಮಾವ್ರೆ ಅಂತ ಕರೆಯುತ್ತಿದ್ದವಳು ಈಗೀಗ ಅಕ್ಕ ಅಕ್ಕಾ... ಅಂತ ಉಲಿಯುತ್ತಿದ್ದಾಳೆ. ಅದಕ್ಕೆ ಆತಂಕ ಆಯ್ತು' ಅಂದಳು!

***




ಗುಂಡ ಹೀಗೊಂದು ಸಲಹೆ ಹರಿಬಿಟ್ಟ.
ನಿಮ್ಮ ಹೆಂಡತಿ ದಪ್ಪಗಿದ್ದರೆ ಬುಲೆಟ್ ಗಾಡಿ ತಗೊಳ್ಳಿ. ನಿಮ್ಮ ಹೆಂಡತಿ ತೆಳ್ಳಗಿದ್ದರೆ ಸ್ಪ್ಲೆಂಡರ್ ತಗೊಳ್ಳಿ. ಹೆಂಡತಿ ಕುಳ್ಳಗಿದ್ದರೆ ಸ್ಕೂಟಿ ತೊಗೊಳ್ಳಿ. ಮದುವೇನೆ ಆಗಿಲ್ಲವೆಂದರೆ, ನೆಮ್ಮದಿಯ ಉಸಿರು ತಗೊಳ್ಳಿ!

***

ಪರಿಚಯದ ಹುಡುಗ ಬಂದು 'ಬನ್ನಿ ಅಂಕಲ್, ಹೋಗೋಣ ಅಂದ.' ಅಂಕಲ್, 'ನೀನ್ಯಾಕೆ ಬರೋಕೆ ಹೋದ್ಯೋ ಲೋಕೇಶ' ಅಂದ್ರು. ಅದಕ್ಕೆ ಹುಡುಗ, 'ನೀವೇ ಹೇಳಿದ್ರಂತಲ್ಲಾ ಅಂಕಲ್... ನಮ್ಮಪ್ಪನ ಹತ್ರ ಲೊಕೇಶನ್ ಕಳ್ಸು, ಬರ್ತೀನಿ ಅಂತ. ಅದಕ್ಕೆ ನಾನೇ ಬಂದೆ. ಬನ್ನಿ ಬನ್ನಿ' ಅಂದ. ಅಯ್ಯೋ ಭಗವಂತಾ, ನಾನು ಹೇಳಿದ್ದು, ವಾಟ್ಸ್‌ಆ್ಯಪ್‌ನಲ್ಲಿ location (ಲೊಕೇಶನ್) ಕಳ್ಸು ಅಂತ!

***

ಅಮೆರಿಕದಿಂದ ಬಂದ ಪ್ರವಾಸಿಯೊಬ್ಬ ಬಬ್ಲುನನ್ನು, 'ಈ ಹಳ್ಳಿಯಲ್ಲಿ ಯಾರಾದರೂ ದೊಡ್ಡ ವ್ಯಕ್ತಿ ಹುಟ್ಟಿದ್ದಾರೆಯೇ' ಎಂದು ಪ್ರಶ್ನಿಸಿದ. ಅದಕ್ಕೆ ಬಬ್ಲು , 'ಇಲ್ಲ ಸರ್. ಇಲ್ಲಿ ಎಲ್ಲಾ ಚಿಕ್ಕ ಪುಟಾಣಿ ಮಕ್ಕಳೇ ಹುಟ್ಟಿರುವುದು' ಅಂದ!

**ಸಂಗ್ರಹ: ಸಿಹಿಮೊಗೆ ರಮೇಶ್, ಮೈಸೂರು**